


# ಐಹೊಳೆಯಲ್ಲಿ ಕನ್ನಡದ ದುಸ್ಥಿತಿ!

ಇತಿಹಾಸ ಪ್ರಸಿದ್ಧ ಐಹೊಳೆಗೆ (ಬಾದಾಮಿ ತಾಲ್ಲೂಕು) ದಿನನಿತ್ಯ ಸಾವಿರಾರು ಪ್ರವಾಸಿಗರು (ವಿದೇಶಿಯರೂ) ನಮ್ಮ ಸಾಂಸ್ಕೃತಿಕ ಪರಂಪರೆಯ ಹೆಮ್ಮೆಯ ದುರ್ಗಾ ದೇವಸ್ಥಾನವನ್ನು ನೋಡಲು ಬರುತ್ತಾರೆ. ಈ ತಾಣದ ಪ್ರವೇಶ ದ್ವಾರದಲ್ಲಿದ್ದ ಕಾಂಕ್ರೀಟ್ ಶಿಲೆಯಲ್ಲಿದ್ದ ಕನ್ನಡ ಬರಹ ನೋಡಿ ವ್ಯಥೆಯಾಯಿತು. ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಸರಿಯಾಗಿಯೇ ಇದ್ದು, ಕನ್ನಡದಲ್ಲಿ ಮಾತ್ರ ಅದೆಂತಹ ನಿರ್ಲಕ್ಷ್ಯ?

ನೀವೇ ನೋಡಿ. ಕರ್ನಾಟಕದ ಭವ್ಯ ಪರಂಪರೆಯ ತಾಣಗಳನ್ನು ಕನ್ನಡ ಸರಿಯಾಗಿ ಗೊತ್ತಿಲ್ಲದವರ ಕೈಗಿತ್ತು ಕನ್ನಡಕ್ಕೆ ಅಪಮಾನ ಮಾಡಿಸಿಕೊಳ್ಳುವಂತಾಗಿದೆ ನಮ್ಮ ಪರಿಸ್ಥಿತಿ. ಈ ಚಿತ್ರ ಮೇಲಿನದನ್ನು ಇಂಗ್ಲಿಷ್‌ನ ಯಥಾವತ್ತಾಗಿ ಕನ್ನಡದಲ್ಲಿ 'ಬುಕಿಂಗ್ ಕೌಂಟರ್' ಎಂದು ಅಚ್ಚು ಮಾಡಲಾಗಿದೆ. ಆದರೆ, ಅದರ ಕೆಳಗೆ 'ClOAK ROOM' ಅನ್ನುವ ಪದವನ್ನು ಕನ್ನಡಕ್ಕೆ ಅನುವಾದಿಸುವಲ್ಲಿ ಎಡವಿರುವ ಅಧಿಕಾರಿಗಳು 'ಸಾಮಾನಾ ಕೋಣೆ' ಎಂದು ಬರೆದಿರುವ ಕಾಂಕ್ರೀಟ್ ಶಿಲೆಯನ್ನು ಹಾಗೆಯೇ ಇಟ್ಟಿದ್ದಾರೆ. ಸಾಲದಕ್ಕೆ ಅಲ್ಲಿನ ವಸ್ತು ಸಂಗ್ರಹಾಲಯದ ಗಾಜಿನ ಪೆಟ್ಟಿಗೆಯ ಮೇಲಿಟ್ಟಿರುವ ಕನ್ನಡ ವಿವರಗಳಲ್ಲೂ 'ಚಲುಕ್ಯ' ಮತ್ತು 'ಚಾಲೂಕ್ಯ' ಎಂಬ ಅಪಭ್ರಂಶಗಳೂ ಕನ್ನಡಿಗರ ಮುಖಕ್ಕೆ ಕಪ್ಪು ಶಾಹಿಯನ್ನು ಬಡಿಯುತ್ತವೆ.

ಇವೆಲ್ಲದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಪುರಾತತ್ವ ಇಲಾಖೆಯ ಅಧಿಕಾರಿಗಳಿಗೆ ರಾಜ್ಯದಲ್ಲಿ ಇಂಗ್ಲಿಷ್–ಕನ್ನಡ ಅನುವಾದಕರು ಯಾರೂ ಸಿಗಲಿಲ್ಲವೇ ಎಂಬ ಅನುಮಾನ ಮೂಡುತ್ತದೆ. ಅಲ್ಲದೆ ಕನ್ನಡದಲ್ಲಿ ಹೇಗೆ ಬರೆದರೂ ನಡೆಯುತ್ತದೆ ಎಂಬ ಉದ್ಧಟತನವೇ ಎಂಬ ಸಂಶಯ ಮೂಡುತ್ತದೆ. ಚುನಾಯಿತ ಪ್ರತಿನಿಧಿಗಳಿಗೆ ಇದು ಗಂಭೀರ ಸಮಸ್ಯೆಯೆಂದು ಕಾಣಿಸುವುದಿಲ್ಲವೇ? ಮುಂದಾದರೂ ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಂಡು ಆಗಿರುವ ಅಕ್ಷರ ದೋಷಗಳನ್ನು ಸರಿಪಡಿಸುವರೇ?

–ಆರ್.ವಿ. ಭಟ್ಟ, ಬೆಳಗಾವಿ

# ಕಣ್ಮನ ಸೆಳೆವ ತ್ರಿಡಿ ದೃಶ್ಯ

ವಾರಾಣಸಿಯ ಲಾಲ್ ಬಹದ್ದೂರ್ ಶಾಸ್ತ್ರಿ ವಿಮಾನ ನಿಲ್ದಾಣದ ಒಳಾಂಗಣದಲ್ಲಿದ್ದ ಪ್ರವೇಶ ದ್ವಾರಕ್ಕೆ ಹೆಜ್ಜೆಯಿರಿದೆ. ಎದುರಿಗೆ ವಾರಾಣಸಿಯ ಪೂರಾ ಗಂಗಾಘಾಟ್‌ನ ಮೋಹಕ ಸಂಧ್ಯಾಕಾಲದಲ್ಲಿನ ಗಂಗಾರತಿಯ ದೃಶ್ಯವು ಕಣ್ಣಮುಂದೆ ಮೂಡಿತು. ನಂತರ ಅದು ತ್ರಿಡಿ ತಂತ್ರಜ್ಞಾನದಲ್ಲಿ ಮೂಡಿದ ದೃಶ್ಯವೆಂದು ಅರಿವಾಯಿತು. ಈ ದೃಶ್ಯವು ವಿಮಾನ ನಿಲ್ದಾಣಕ್ಕೆ ಬರುವ ಎಲ್ಲ ಪ್ರಯಾಣಿಕರನ್ನು ಕ್ಷಣಕಾಲ ನಿಲ್ಲುವಂತೆ ಮಾಡುತ್ತದೆ. ಲಾಲ್ ಬಹದ್ದೂರ್ ಶಾಸ್ತ್ರಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಉತ್ತರ ಪ್ರದೇಶದ ಬಬತ್ ಪುರದಲ್ಲಿದೆ. ಹಿಂದೆ ವಾರಾಣಸಿ ವಿಮಾನ ನಿಲ್ದಾಣವೆಂದು ಕರೆಯುತ್ತಿದ್ದ ಈ ನಿಲ್ದಾಣಕ್ಕೆ 2005ರ ಅಕ್ಟೋಬರ್‌ನಲ್ಲಿ ಪ್ರಧಾನಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಹೆಸರನ್ನು ಮರು ನಾಮಕರಣ ಮಾಡಲಾಯಿತು. ಇದು ಪ್ರಯಾಣಿಕರ ಚಲನೆಗೆ ಸಂಬಂಧಿಸಿದಂತೆ ಭಾರತದ 18ನೇ ಅತ್ಯಂತ ಜನನಿಬಿಡ ನಿಲ್ದಾಣವಾಗಿದೆ. ಇದಕ್ಕೆ ಏರ್‌ಪೋರ್ಟ್ ಕೌನ್ಸಿಲ್ ಇಂಟರ್ ನ್ಯಾಷನಲ್‌ನಿಂದ 2020ರಲ್ಲಿ ಏಷ್ಯಾಪೆಸಿಫಿಕ್‌ನ ಅತ್ಯುತ್ತಮ ವಿಮಾನ ನಿಲ್ದಾಣವೆಂದು ಪ್ರಶಸ್ತಿಯನ್ನು ನೀಡಲಾಗಿದೆ.

–ಎಸ್. ಪ್ರಭಾವತಿ, ಬೆಂಗಳೂರು







# ಬೋರಂಗಿ ಎಂಬ ಬಹುರಂಗಿ!

ಚಿತ್ರದಲ್ಲಿ ಕಾಣುತ್ತಿರುವ ಕೀಟವು ಅಪಾಯಕಾರಿಯಲ್ಲದ ಆಟದ ಕೀಟವಾಗಿದ್ದು, ಇದನ್ನು ಕಂಡಾಕ್ಷಣ ನೆನಪಿಗೆ ಬಂದದ್ದು ನನ್ನ ಬಾಲ್ಯ. ಜಾಮಿಟ್ರಿ ಬಾಕ್ಸ್ ಅಥವಾ ಇನ್ನಿತರ ಪುಟ್ಟ ಬಾಕ್ಸ್‌ನಲ್ಲಿ ಈ ಬೋರಂಗಿ ಅಥವಾ ಜೀರಣಿಗೆ ಎಂಬ ಕೀಟವನ್ನು ಇಟ್ಟು ಅದು ಮೊಟ್ಟೆ ಇಡುವವರೆಗೆ ಕಾದು ನಂತರ ಅದರ ಕುತ್ತಿಗೆಗೊಂದು ದಾರ ಕಟ್ಟಿ ಹಾರಿಸುತ್ತಿದ್ದ ಬಾಲ್ಯ ಕಣ್ಣಮುಂದೆ ಬಂದು ಹೋಯಿತು. ನನ್ನಂತೆ ಬಹುತೇಕರು ಬಾಲ್ಯದ ದಿನಗಳಲ್ಲಿ ಬೋರಂಗಿಯ ಜೊತೆ ಆಟ ಆಡಿರುತ್ತಾರೆ. ಖಾಲಿಯಾದ ಕಡ್ಡಿ ಪೆಟ್ಟಿಗೆಯಲ್ಲಿ ಹಾಕಿ ಅದು ಹೆಚ್ಚಾಗಿ ತಿನ್ನುವ ಜೀರಣಿಗೆ ಮರದ ಎಲೆಯನ್ನು ತಿನ್ನಿಸಿ ಖುಷಿ ಪಟ್ಟಿರುತ್ತಾರೆ. ಈ ಕೀಟಗಳು ಎಲೆಯನ್ನು ತಿನ್ನುವುದನ್ನು ನೋಡುವುದೇ ಚೆಂದ. ಇವು ಹಾರುವಾಗ ಮಾಡುವ ಸದ್ದೂ ಕೇಳಲು ಇನ್ನೂ ಚೆಂದ. ಈಗಿನ ನಿರ್ಜೀವ ಆಟಿಕೆಗಳೊಂದಿಗೆ ಆಡುವ ಈಗಿನ ಮಕ್ಕಳಿಗೆ, ಮಿಠ್ರನೇ ಮಿಂಚುವ ಹಸಿರು ಬೋರಂಗಿಯಾಗಲಿ, ಕಂದು ಮಿಶ್ರಿತ ಕೆಂಪು ಬೋರಂಗಿಯಾಗಲಿ ಗೊತ್ತೇ ಇರುವುದಿಲ್ಲ. ಸಣ್ಣ ಗಾತ್ರದ ಹಸಿರು ಬೋರಂಗಿಗೆ ನಾವು ಕುಡ್ಡ ಬೋರಂಗಿ ಎಂದು ಕರೆಯುತ್ತಿದ್ದೆವು. ಅದೇನು ಕುರುಡಿರುತ್ತಿರಲಿಲ್ಲ. ಅದು ನಮ್ಮನ್ನು ಕಚ್ಚುತ್ತಿತ್ತು. ಸಿಟ್ಟಿಗೆದ್ದ ನಾವು ಅದಕ್ಕೆ ಕುಡ್ಡ ಬೋರಂಗಿ ಎನ್ನುತ್ತಿದ್ದೆವು.

–ಸುಭಾಸ ಯಾದವಾಡ, ವಿಜಯಪುರ